"ರಿಟೈರ್ ಆಯ್ತು, ಮೊಮ್ಮಕ್ಕಳಾದರು. ಇನ್ನೂ ಆ ಕಂಪ್ಯೂಟರಿನಲ್ಲಿ ಸದಾ ನೋಡ್ತಾ ಇರೋಕೆ ಏನಿರುತ್ತೋ ಅಪ್ಪ."

ಮರುಮಾತಾಡದೇ ಪ್ರಸಾದ್ ಫೇಸ್‌ಬುಕ್ಕಿನಲ್ಲಿ ಗೀತಾಳ ಪುಟ ತೆರೆದರು. ಮತ್ತೆ ಅದೇ ಚಿತ್ರ, ಅದೇ ನೆನಪು. ತಾವು ಸಿದ್ಧಮಾಡಿಕೊಂಡಿದ್ದ ಸಂದೇಶವನ್ನು ಟೈಪ್ ಮಾಡ ಹೊರಟರು. ಏಕೋ ಕೈಬರಲಿಲ್ಲ. 'ನನ್ನ ಮೆಸೇಜ್ ನೋಡಿ ಅವಳೇನು ಅಂದುಕೊಂಡಾಳು? ಮತ್ತೆ ಅವಳಲ್ಲಿ ಹಿಂದಾದ ವಿಷಯಗಳನ್ನು ಕೆದಕಬೇಕೆ? ನಲವತ್ತು ವರ್ಷಗಳ ಹಿಂದೆ ಶಾಂತವಾಗಿದ್ದ ನೀರಿಗೆ ಕಲ್ಲು ಹೊಡೆದು ಬೇಡದ ಕಂಪನಗಳನ್ನು ಸೃಷ್ಟಿಸಿದ್ದಾಯಿತು. ಹೊರಬರಲು ವಿಲಿ ವಿಲಿ ಒದ್ದಾಡಿದ್ದಾಯಿತು, ಈಗ ಮತ್ತೆ ಅದೇ ಕೆಲಸ ಮಾಡ ಬೇಕೇ? ಬೇಡ, ಅವಳ ಪಾಡಿಗೆ ಅವಳಿರಲಿ.'

ಆದರೂ ಸುಮ್ಮನಾಗಲಿಲ್ಲ ಅವರ ಮನಸ್ಸು. ಕ್ಷಮೆ ಕೇಳಲೇಬೇಕು ಎಂದು ಒತ್ತಾಯಿಸಿತು. 'ಸರಿ, ನಾಳೆ ನೋಡೋಣ' ಎಂದು ಸುಮ್ಮನಾದರು. ಫೇಸ್‌ಬುಕ್ ಪುಟವನ್ನು ಮುಚ್ಚಿದರು. ಸಂಜೆ ಪ್ರಸಾದ್ ಟೀವಿಯ ಮುಂದೆ ಕುಳಿತು ಏನೋ ನೋಡುತ್ತಿದ್ದರು. ಕಂಪ್ಯೂಟರ್ ನೋಡುತ್ತಿದ್ದ ರೇವತಿ, "ರೀ ಬನ್ನಿ" ಎಂದು ಕರೆದರು. ಅತ್ತ ಹೋಗಿ ನೋಡಿದರೆ ಕಂಪ್ಯೂಟರ್ ಮೇಲೆ ಅನಿತಾಳ ಚಿತ್ರ!

"ಏನ್ರಿ, ಇವಳು ನಿಮಗೂ ಫ್ರೆಂಡಾ. ಕಾಮೆಂಟ್ ಬೇರೆ ಹಾಕಿದೀರಾ? ನಾನು ನೋಡ್ತಾ ಇರಲಿಲ್ಲ. ನಿಮ್ಮ ಕಾಮೆಂಟ್ ಇರೋದು ಗೊತ್ತಾಗಿ ನೋಡಿದೆ."

"ಅವಳು ಗೊತ್ತಿಲ್ಲದೇ ಏನು? ನಮ್ಮ ರಸ್ತೆಯಲ್ಲಿದ್ದ ಹುಡುಗಿ. ನಿನಗೂ ಗೊತ್ತಾ?"

"ನನಗೆ ಮುಂಚೆ ಗೊತ್ತಿರಲಿಲ್ಲ. ನಮ್ಮ ಭಾವನ ದೂರದ ಸಂಬಂಧಿ ಅವಳು. ಹಾಗೆ ಗೊತ್ತು. ಅಲ್ಲದೆ ಅವಳ ಕಸಿನ್ ಗೀತಾ ನಾಗರಾಜ್ ಅಂತ ಇದ್ದಾಳೆ. ಅವಳೂ ಹೀಗೇ ಫ್ರೆಂಡ್ ಆದಳು. ಇವರೆಲ್ಲಾ ತುಂಬಾ ಮುಂದುವರೆದಿರೋರು, ಬಜಾರೀರು. ಆ ಗೀತಾ ಯಾವುದೋ ಹುಡುಗನ ಜೊತೆ ಒಂದು ವರ್ಷ ಓಡಾಡಿ ಅವನನ್ನ ಬಿಟ್ಟು ಬೇರೆಯವನನ್ನ ಕಟ್ಟಿಕೊಂಡಳು ಅಂತ ನಮ್ಮ ಮನೇಲಿ ಮಾತಾಡ್ಕೊತಾ ಇದ್ರು. ಅದಕ್ಕೇ ನಾನು ಈ ಹುಡುಗೀರ ಪೋಸ್ಟ್ ಯಾವುದನ್ನೂ ನೋಡೊಲ್ಲ," ಎಂದು ನಕ್ಕರು. ಆ ನಗುವಿನ ಅರ್ಥವನ್ನು ಊಹಿಸುತ್ತಾ ಪ್ರಸಾದ್ ಟೀವಿಯತ್ತ ಹಿಂದಿರುಗಿದರು.

## ಸಿಡ್ನಿ ಶ್ರೀನಿವಾಸ್

ಮೂಲತಃ ಬೆಂಗಳೂರಿನವರಾದ ಸಿಡ್ನಿ ಶ್ರೀನಿವಾಸ್ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ ಹಾಗೂ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರು.

ಆಸ್ಟ್ರೇಲಿಯಾ ಮಾತ್ರವಲ್ಲದೇ ಜರ್ಮನಿ, ಜಪಾನ್, ಅಮೆರಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನು ಮಾಡಿದ್ದಾರೆ. 'ಫ್ಲೂಯಿಡ್ ಮೆಕ್ಯಾನಿಕ್', 'ಆಪ್ಟಿಮೈಜೇಶನ್' ವಿಷಯಗಳಲ್ಲಿ ಪರಿಣತರು. ಅವರ ಸುಮಾರು 100 ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. 'ಶ್ರೀನಿವಾಸ ರಾಮಾನುಜನ್', 'ಗೆಲಿಲಿಯೊ', 'ನ್ಯೂಟನ್', 'ಅಲ್ಬರ್ಟ್ ಐನ್‌ಸ್ಟೈನ್' ಈ ನಾಲ್ಕು ವಿಜ್ಞಾನಿಗಳ ಕುರಿತ ಪುಸ್ತಕಗಳು ಕನ್ನಡ, ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.